ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ: 22268390, ಫಾಕ್ಸ್: 22266481
ಅಂಚೆ ಪೆಟ್ಟಿಗೆ ನಂ. 5056
ಇ-ಮೇಲ್ :kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ
"ಉದ್ಯೋಗ ಸೌಧ ",
ವೆಬ್ ಸೈಟ್: http://kpsc.kar.nic.in

ಸಂಖ್ಯೆ: ಆರ್ (1)25 /2023-24/ಪಿಎಸ್‌ಸಿ

ದಿನಾಂಕ: ~~21/04/2023~~ 28/04/2023

ಅಡಕಗಳು:

ಇಂದ:
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ,
ಬೆಂಗಳೂರು.

ಇವರಿಗೆ:-

ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
ವಿಕಾಸ ಸೌಧ
ಬೆಂಗಳೂರು-560001

29/04/23

ಮಾನ್ಯರೆ,

ವಿಷಯ:- ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯಾಧಿಕಾರಿಗಳು -400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ:- 1. ತಮ್ಮ ಕಛೇರಿ ಪತ್ರ ಸಂಖ್ಯೆ: ಪಸಂಮೀಇ-147/ಪಸಸೇ 2021 (ಭಾ-1) ದಿನಾಂಕ 21.03.2023
2. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 133 ಬಿಸಿಎ 2023 ದಿನಾಂಕ: 27.03.2023
3. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 135 ಬಿಸಿಎ 2023 ದಿನಾಂಕ: 27.03.2023

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1ರ ಪತ್ರದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯಾಧಿಕಾರಿಗಳು -400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತೀರಿ. ಈ ಮಧ್ಯೆ ಸರ್ಕಾರವು ಉಲ್ಲೇಖ 2ರ ಆದೇಶದಲ್ಲಿ ಹೊಸದಾಗಿ E.W.S ಮೀಸಲಾತಿಯನ್ನು ಸೇರ್ಪಡೆ ಮಾಡಿದ್ದು, ಅದರ ಮೀಸಲಾತಿ ಪ್ರಮಾಣವನ್ನು ಶೇ 10 ರಷ್ಟು ನಿಗದಿಪಡಿಸಿರುತ್ತದೆ ಮತ್ತು ಉಲ್ಲೇಖ-3ರ ಆದೇಶದಲ್ಲಿ ಪ್ರವರ್ಗ 2ಬಿ ಮೀಸಲಾತಿಯನ್ನು ಶೂನ್ಯ ಪ್ರಮಾಣಕ್ಕೆ ಇಳಿಸಿದ್ದು, ಪ್ರವರ್ಗ-3ಎ ಮತ್ತು 3ಬಿ ಬದಲಾಗಿ, ಪ್ರವರ್ಗ-2ಸಿ ಮತ್ತು 2ಡಿ ಅನ್ನು ಸೃಜಿಸಿದ್ದು, ಸದರಿ ಪ್ರವರ್ಗಗಳ ಮೀಸಲಾತಿಯ ಪ್ರಮಾಣವನ್ನು ಕ್ರಮವಾಗಿ ಶೇ.6 ಮತ್ತು ಶೇ.7ಕ್ಕೆ ಹೆಚ್ಚಿಸಿರುತ್ತದೆ.

........2

ಮೇಲ್ಕಂಡಂತೆ ಸರ್ಕಾರವು ಜಾರಿ ಮಾಡಿರುವ ಆದೇಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಇರುವ ಮೀಸಲಾತಿ ನಿಯಮಗಳಲ್ಲಿ ಬದಲಾವಣೆಗಳಾಗಿದ್ದು, ಅದರಂತೆ ಹುದ್ದೆಗಳ ವರ್ಗೀಕರಣವು ಪರಿಷ್ಕರಣೆಯಾಗಬೇಕಿರುತ್ತದೆ. ಆದ್ದರಿಂದ ಸರ್ಕಾರದ ಹೊಸ ಮೀಸಲಾತಿ ನಿಯಮಗಳಂತೆ ಸದರಿ ಹುದ್ದೆಗಳ ವರ್ಗೀಕರಣವನ್ನು ಪರಿಷ್ಕರಿಸಿ ಹೊಸದಾಗಿ ಪ್ರಸ್ತಾವನೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಟಿ.ಪ್ರಕಾಶ್)
ಸಹಾಯಕ ಕಾರ್ಯದರ್ಶಿ,
o/c ಕರ್ನಾಟಕ ಲೋಕ ಸೇವಾ ಆಯೋಗ

ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ: 22268390, ಫಾಕ್ಸ್: 22266481
ಅಂಚೆ ಪೆಟ್ಟಿಗೆ ನಂ. 5056
ಇ-ಮೇಲ್ :kpsc-ka@nic.in
ಸಂಖ್ಯೆ: ಆರ್ (1) 968 /2023-24/ಪಿಎಸ್‌ಸಿ

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ
"ಉದ್ಯೋಗ ಸೌಧ ",
ವೆಬ್ ಸೈಟ್: http://kpsc.kar.nic.in
ದಿನಾಂಕ: 31/05/2023

ಅಡಕಗಳು:

ಇಂದ:
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ,
ಬೆಂಗಳೂರು.

" ನೆನಪೋಲೆ"

ಇವರಿಗೆ:-

**ಸರ್ಕಾರದ ಕಾರ್ಯದರ್ಶಿ,**
**ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ**
**ವಿಕಾಸ ಸೌಧ**
**ಬೆಂಗಳೂರು-560001**

**ಮಾನ್ಯರೆ,**

**ವಿಷಯ:- ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯಾಧಿಕಾರಿಗಳು -400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.**

**ಉಲ್ಲೇಖ:- 1. ತಮ್ಮ ಕಛೇರಿ ಪತ್ರ ಸಂಖ್ಯೆ: ಪಸಂಮೀಇ-147/ಪಸಸೇ 2021 (ಭಾ-1) ದಿ:21.03.2023**
**2. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 133 ಬಿಸಿಎ 2023 ದಿನಾಂಕ: 27.03.2023**
**3. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 135 ಬಿಸಿಎ 2023 ದಿನಾಂಕ: 27.03.2023**
**4. ಆಯೋಗದ ಪತ್ರ ಸಂಖ್ಯೆ: ಆರ್ (1) 25/2023-24/ಪಿಎಸ್‌ಸಿ ದಿ: 28.04.2023**

-----

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶುವೈದ್ಯಾಧಿಕಾರಿಗಳು -400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವಂತೆ ಕೋರಿ ಸಲ್ಲಿಸಿದ್ದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖ-4ರ ಆಯೋಗದ ಪತ್ರದಲ್ಲಿ ತಿಳಿಸಿರುವಂತೆ ಸರ್ಕಾರವು ಇತ್ತೀಚಿಗೆ ಜಾರಿ ಮಾಡಿರುವ ಹೊಸ ಮೀಸಲಾತಿ ನಿಯಮಗಳನ್ವಯ ಸದರಿ ಹುದ್ದೆಗಳ ವರ್ಗೀಕರಣವನ್ನು ಪರಿಷ್ಕರಿಸಿ ಪ್ರಸ್ತಾವನೆ ಸಲ್ಲಿಸುವಂತೆ ಮತ್ತೊಮ್ಮೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಟಿ.ಪ್ರಕಾಶ್ )
ಸಹಾಯಕ ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ